





ಮದರಂಗಿ ಅಥವಾ ಈ ಗೋರಂಟಿ ಗಿಡವು (ಹೆನ್ನಾ) ಉತ್ತರ ಆಫ್ರಿಕಾ ಹಾಗೂ ನೈಋತ್ಯ ಏಷ್ಯಾದ ಮೂಲವಾಸಿ. ಇದನ್ನು ಸಾಮಾನ್ಯವಾಗಿ ಅಲಂಕಾರಕ್ಕಾಗಿ ಹಾಗೂ ಬಣ್ಣಕ್ಕಾಗಿ ಹೆಚ್ಚಾಗಿ ಉಪಯೋಗಿಸುತ್ತಾರೆ. ವಯಸ್ಸಿನ ಬೇಧಭಾವವಿಲ್ಲದೇ ಸಣ್ಣ ಮಕ್ಕಳಿಂದ ಹಿಡಿದು, ವಯಸ್ಸಾದವರೂ ಇದನ್ನು ಇಷ್ಟಪಡುತ್ತಾರೆ. ಹೆಣ್ಣುಮಕ್ಕಳು ತಮ್ಮ ಕೈಗೆ ಹಾಗೂ ಕಾಲಿಗೆ ಅಲಂಕಾರವಾಗಿ ವಿಶೇಷ ಸಂದರ್ಭಗಳಲ್ಲಿ ಇದನ್ನು ಬಳಸಿದರೆ, ವಯಸ್ಸಾದವರು ತಲೆ ಕೂದಲು ಬಿಳಿಯಾದರೆ ಇದರ ಎಲೆಯನ್ನು ನೀರಿನಲ್ಲಿ ಅರೆದು ತಲೆಗೆ ಹಚ್ಚಿಕೊಳ್ಳುತ್ತಾರೆ. ಇದರಿಂದ ತಲೆ ಕೂದಲು ಕೆಂಪಾಗಿ ಕಾಣುತ್ತದೆ. ಕೆಲವರು ವಿಶೇಷ ಸಂದರ್ಭಗಳಲ್ಲಿ ಮದರಂಗಿ ಶಾಸ್ತ್ರ ಎಂಬ ಆಚರಣೆಯನ್ನು ನಡೆಸುತ್ತಾರೆ. ರೇಷ್ಮೆ ಹಾಗೂ ಉಣ್ಣೆ ಬಟ್ಟೆಗಳಿಗೆ ಬಣ್ಣ ಕೊಡಲು ಈ ಮದರಂಗಿ ಗಿಡದ ಎಲೆಯನ್ನು ಉಪಯೋಗಿಸುತ್ತಾರೆ.

## ಗಿಡದ ಲಕ್ಷಣ

ಸಾಮಾನ್ಯವಾಗಿ ಪೊದೆ ರೀತಿ ಬೆಳೆಯುವ ಸಸ್ಯ ಇದಾಗಿದ್ದು ಸಣ್ಣ ಎಲೆ ಹಾಗೂ ಬಿಳಿ ಗೊಂಚಲು ಹೂವಾಗುತ್ತದೆ. ಅದರ ಕಾಯಿಯಿಂದ ಹಾಗೂ ಗಿಡದ ಕಾಂಡದಿಂದ ಹೆಚ್ಚಿನ ಗಿಡಗಳನ್ನು ಬೆಳೆಸಬಹುದು. ಬೋನ್ಸಾಯ್ ಗಿಡವಾಗಿಯೂ ಇದನ್ನು ಬೆಳೆಸಬಹುದು. ಭಾರತ, ಈಜಿಪ್ಟ್, ಪರ್ಷಿಯಾ ಹೀಗೆ ಹಲವು ದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ. ಪಂಜಾಬಿನ ಫರೀದಾಬಾದ್ ಮತ್ತು ಗುಜರಾತಿನ ಬಾದ್ರೋಲಿ ಮದರಂಗಿ ಉತ್ಪಾದನೆಯ ಮುಖ್ಯ ಕೇಂದ್ರವಾಗಿದೆ. ಇದು ಸುಮಾರು ಒಂದು ಎಕರೆಗೆ 350–750ಕಿ.ಗ್ರಾಂ ಒಣ ಎಲೆ ದೊರೆಯುತ್ತದೆ. ಇವತ್ತಿನ ಮಾರುಕಟ್ಟೆಯಲ್ಲಿ ಕಲಬೆರಕೆ ಮೆಹಂದಿ ಇರುವುದು ಒಂದು ದುರದೃಷ್ಟ. ಹೂವಿನಿಂದ ಪರಿಮಳಯುಕ್ತ ತೈಲವನ್ನು ಮಾಡುತ್ತಾರೆ. ಹೀಗೆ ಹಲವಾರು ಉಪಯೋಗಗಳು ಈ ಮೆಹಂದಿ ಗಿಡದಲ್ಲಿ ಇದೆ.

ಇದನ್ನು ಕೈ ಮತ್ತು ಕಾಲುಗಳ ಮೇಲೆ ಅಲಂಕಾರ ಮಾಡಲು ಹೆಂಗಳೆಯರು ಹೆಚ್ಚಾಗಿ ಬಳಸುವುದು ವಾಡಿಕೆ. ಮದರಂಗಿಯಲ್ಲಿ ಕಪ್ಪು ಅಥವಾ ಕಂದು ಬಣ್ಣದ ಒಂದು ಅಂಶವಿದ್ದು, ಇದನ್ನು ಎಲ್ಲಿ ಲೇಪಿಸುತ್ತೇವೆಯೋ ಅಲ್ಲಿ ಕೆಂಪು ಅಥವಾ ಕಂದು ಬಣ್ಣದ ಕಲೆ ಮೂಡುತ್ತದೆ. ಹಾಗಾಗಿ ಇದನ್ನು ಸೌಂದರ್ಯ ಪ್ರಸಾದನ ಸಾಮಗ್ರಿಗಳಲ್ಲಿ ಬಳಸುತ್ತಾರೆ.

## ಉಪಯೋಗ ಹಲವು

ಮದರಂಗಿ ತಂಪು ಉಂಟು ಮಾಡುವ ಸಾಧನ. ಮೊಡವೆ ಹೋಗಲಾಡಿಸಲು ಸಹಕಾರಿ. ದೇಹದಲ್ಲಿ ಹೆಚ್ಚಿನ ಉಷ್ಣತೆ ಇದ್ದರೆ ಅದನ್ನು ಮದರಂಗಿ ತೊಡೆದು ಹಾಕುತ್ತದೆ. ಮದರಂಗಿ ಎಲೆಯನ್ನು ಒಣಗಿಸಿ ಪುಡಿ ಮಾಡಿ ಮತ್ತೆ ನೀರಿನಲ್ಲಿ ಕಲಸಿ ತಲೆಕೂದಲಿನ ಬುಡಕ್ಕೆ ಹಚ್ಚುವುದರಿಂದ ಹಲವು ಪ್ರಯೋಜನಗಳಿವೆ. ಇದು ತಲೆಕೂದಲ ಸಮಸ್ಯೆಗೆ ಸೂಕ್ತ ಪರಿಹಾರ ಕೊಡುತ್ತದೆ. ತಲೆಹೊಟ್ಟನ್ನೂ ನಿವಾರಿಸುತ್ತದೆ. ಕೂದಲು ನಯವಾಗಿ ಹೊಳಪು ಕೂಡ ಬರುತ್ತದೆ. ಬಿಳಿಕೂದಲು, ಕೂದಲ ಅಕಾಲಿಕ ನರೆ ಮುಂತಾದ ಸಮಸ್ಯೆಗಳಿಗೂ ರಾಮಬಾಣ ಈ ಮದರಂಗಿ. ಇದರ ಹೇರ್‌ಪ್ಯಾಕ್ ಕೂದಲ ಆರೈಕೆಗೆ ಸಹಕಾರಿ.

ಔಷಧಿಯಾಗಿಯೂ ಮದರಂಗಿ ಬಳಸುವುದುಂಟು. ಸುಟ್ಟಗಾಯಗಳಿಗೆ ಮದರಂಗಿ ಉತ್ತಮ ಔಷಧಿ. ಮದರಂಗಿ ಗಿಡದ ಎಲೆ ತಂದು ನೀರಿನಲ್ಲಿ ಅರೆದು ಸುಟ್ಟ ಗಾಯದ ಮೇಲೆ ಹಚ್ಚುವುದರಿಂದ ಗಾಯ ಬೇಗನೆ ವಾಸಿಯಾಗುತ್ತದೆ. ಇದರ ತಂಪು ಗುಣದಿಂದ ತಲೆನೋವಿನ ನಿವಾರಣೆಗೆ ಉತ್ತಮ ಔಷಧಿ. ಅಲ್ಲದೆ ಟಿ.ಬಿ. (ಕ್ಷಯ) ನಿವಾರಣೆಯಾಗುತ್ತದೆ. ಬ್ಯಾಕ್ಟೀರಿಯಾ ವಿರೋಧಿ ಗುಣ ಹೊಂದಿರುವುದರಿಂದ ಸೋಂಕು ನಿವಾರಣೆಗೂ ಸಹಕಾರಿ.

ಒಟ್ಟಿನಲ್ಲು ಬಹೂಪಯೋಗಿ ಮದರಂಗಿ ಗಿಡವನ್ನು ಮನೆ ಮುಂದೆ ಅಂಗಳದಲ್ಲಿ ಹೆಚ್ಚಿನ ಉಪಚಾರವಿಲ್ಲದೆ ಬೆಳೆಸಿಕೊಳ್ಳಬಹುದು. ಇದರಿಂದ ಸೌಂದರ್ಯ, ಆರೋಗ್ಯ ಎರಡನ್ನೂ ಕಾಪಾಡಿಕೊಳ್ಳಬಹುದು. ■